ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

ಹೆಂಡತಿ ಸದಾ ನಗುನಗುತ್ತಾ ಇರಲು ಏನು ಮಾಡಬೇಕು?



ಆಕೆಯ ಎದುರು ಸದಾ ಕನ್ನಡಿ ಇರುವಂತೆ ನೋಡಿಕೊಳ್ಳಬೇಕು.

ಎಂ.ಬಿ. ಖೋದಾನಪೂರ, ಸವದತ್ತಿ

ಶನಿದೇವನ ಅಧಿಕಾರದ ಅವಧಿಯು ಎಂದು ಕೊನೆಗೊಳ್ಳುತ್ತದೆ?

ಇರಲಿ ಬಿಡಿ ಸಾರ್! ಪಾಪ, ಈಗಿನ ಅಧಿಕಾರಿಗಳಿಗೆ ಹೋಲಿಸಿದರೆ ಶನಿ ನಿರುಪದ್ರವಿ!

ಗಾಯತ್ರಿ, ರಾಜಾಜಿನಗರ

ಮದಿರೆ, ಮಾನಿನಿಯರೊಟ್ಟಿಗೆ ಕುದುರೆ ಸವಾರಿಯೂ ಸೇರಿದರೆ?



ಮನೆ ಮಾರುವ ದಳ್ಳಾಳಿಗೆ ಶೀಘ್ರವೇ ಶುಕ್ರದೆಸೆ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ತಿಳಿದು ತಪ್ಪು ಮಾಡುವುದೆಲ್ಲಿ, ತಿಳಿಯದೆ ತಪ್ಪು ಮಾಡುವುದೆಲ್ಲಿ?

ಮತಗಟ್ಟೆಯಲ್ಲಿ, ಹಸೆಮಣೆಯಲ್ಲಿ!

ಮಲ್ಲಿಕಾರ್ಜುನ, ಗಿರಗಾಂವ

ದುಃಖವನ್ನು ಬೇಕಾದಷ್ಟು ತಡೆದುಕೊಳ್ಳಬಹುದು, ಸುಖವನ್ನು ತಡೆದುಕೊಳ್ಳುವುದು ಬಹಳ ಕಷ್ಟ. ಏಕೆ?

ಸುಖ ಬಂದಾಗ ಸಾಲ ಕೇಳುವವರು ಬಹಳವಾದ್ದರಿಂದ!

ಮೊಳಕಾಲ್ಮೂರು ಸುರೇಶ್, ಬಳ್ಳಾರಿ

ಪರಿಪೂರ್ಣ ಮಹಿಳೆ ಎಂದರೆ ಯಾರಣ್ಣ?

ಯಾರಣ್ಣನೂ ಅಲ್ಲ; ಯಾರ ಮಗಳೋ, ಸತಿಯೋ ಆಗಿರುತ್ತಾಳೆ!

ಪದ್ಮಜಾ ಸುಂದರೇಶ್, ಮೈಸೂರು

ಬಹಳಷ್ಟು ಹಾಡುಗಾರರು ಹಾಡುವಾಗ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡಿರುತ್ತಾರಲ್ಲಾ, ಏಕೆ?

ಮುಂದೆ ಕುಳಿತಿರುವವರು ಕಿವಿ ಮುಚ್ಚಿಕೊಂಡಿರುವುದು ತಮಗೆ ಕಾಣದಿರಲೆಂದು!

ಅರಸೀಕೆರೆ ಪಿ. ಸುರೇಶ್, ಭದ್ರಾವತಿ

ಮದುವೆ, ನಾಮಕರಣಗಳಿಗೆ ಜ್ಯೋತಿಷ್ಯ ಕೇಳುವವರು ತಮ್ಮ ಸಾವಿನ ದಿನಾಂಕದ ಬಗ್ಗೆ ಏಕೆ ಕೇಳುವುದಿಲ್ಲ?

ಅಪ್ಪಿತಪ್ಪಿ ನಿಜವಾಗಿಬಿಟ್ಟರೆ ಎಂಬ ಭಯ!

ಶ್ವೇತಾ ಲಕ್ಷ್ಮಿ ಅಮ್ಮೆ, ಬೆಂಗಳೂರು

ಬರೀ ಪುಸ್ತಕಗಳನ್ನು ಓದುವುದರಿಂದ ಜ್ಞಾನಾರ್ಜನೆ ಆಗುವುದಿಲ್ಲವಂತೆ...?

ನಿಜ. ಬರೀ ಪುಸ್ತಕ ಪ್ರಯೋಜನವಿಲ್ಲ; ಏನಾದರೂ ಪ್ರಿಂಟ್ ಆಗಿರಬೇಕು!

ವಿದ್ಯಾ ಎನ್. ಪೈ, ಕಾಸರಗೋಡ

ಗಾಂಧೀಜಿ ಕಂಡ ರಾಮರಾಜ್ಯದ ಕನಸು ಇಂದು ಹಗಲುಗನಸು ಆಗುತ್ತಿದೆ, ಏಕೆ?

ಹಗಲು ನಿದ್ರಿಸುವವರು ಹೆಚ್ಚಿರುವುದರಿಂದ!

ನಾಗಲಕ್ಷ್ಮಿ ರಾಘವೇಂದ್ರ, ಬೆಂಗಳೂರು

ಸಮುದ್ರಮಥನಕ್ಕೂ, ರಾಜಕೀಯ ಮಥನಕ್ಕೂ ಏನು ವ್ಯತ್ಯಾಸ?

ಅಲ್ಲಿನ ಹಾವು ಹಾವಿನ ರೂಪದಲ್ಲಿತ್ತು; ಇಲ್ಲಿನ ಹಾವುಗಳು ಮಂತ್ರಿಗಳ ರೂಪದಲ್ಲಿವೆ.

ಜಿ.ಆರ್. ಮನೋಹರ ಶೇಟ್, ಬೆಂಗಳೂರು

ಆಕ್ಸಿಡೆಂಟ್‌ನಲ್ಲಿ ಸತ್ತರೆ ರನೌಟ್ ಆದ ಹಾಗೆ; ಆತ್ಮಹತ್ಯೆಯಲ್ಲಿ ಸತ್ತರೆ?

ಹಿಟ್ ವಿಕೆಟ್!

ಹಾದ್ಯ ಜಯಾನಂದ, ಮೈಸೂರು

ಇಲ್ಲೊಬ್ಬ ಹುಡುಗಿಗೆ ಭೀಮನ ಕಾಯ, ಅರ್ಜುನನ ಏಕಾಗ್ರತೆ, ಧುರ್ಯೋಧನನ ಛಲ, ಕೃಷ್ಣನ ರಸಿಕತೆ, ಸ್ವಿಸ್ ಬ್ಯಾಂಕಿನಲ್ಲಿ ಹಣ ಇರುವ ಹುಡುಗ ಬೇಕಂತೆ; ಸಿಗಬಹುದೆ?

ಓ! ಆದರೆ ಭೀಷ್ಮನ ವಯಸ್ಸಾಗಿರುತ್ತದಷ್ಟೆ.

## ಬಹುಮಾನಿತ ಪ್ರಶ್ನೆ

ದೇಶವಳ್ಳಿ ಶಿವು, ದೇಶವಳ್ಳಿ

ಬೆಂಕಿಯಿಂದ ಚಿನ್ನದ ಪರೀಕ್ಷೆ, ಕಷ್ಟದಿಂದ ಧೈರ್ಯದ ಪರೀಕ್ಷೆ; ಸಾವಿನಿಂದ ಯಾವ ಪರೀಕ್ಷೆ?

ಬರೆದಿರುವ ವಿಲ್ ಊರ್ಜಿತವೋ ಅಲ್ಲವೋ ಎಂಬ ಪರೀಕ್ಷೆ!

ವಿ.ಎಸ್. ಹಿಂದೂಪುರ, ಬಳ್ಳಾರಿ

ಅಯ್ಯೋ ಪಾಪ ಎಂದರೆ ಅಯ್ಯೋ ಯಾರಿಗೆ, ಪಾಪ ಯಾರಿಗೆ?

ಅಯ್ಯೋ (I owe ಉರುಫ್ ಸಾಲ) ಅಪ್ಪನಿಗೆ, ಪಾಪ ಸ್ಕೂಲಿಗೆ!

ಶ್ರೀಮತಿ ಸುಧಾರಾಜ್, ಮೈಸೂರು

ಅದಿರು ಅಗೆದು. ಮಣ್ಣಲ್ಲಿ ಬೇರೂರಿ, ಮದ್ಯದ ಪೋಷಣೆಯಲ್ಲಿ ನಳನಳಿಸುವ ಕಮಲ ಬಾಡದ ಹೂ ಆಗುವುದೆ?

ಇರುವ ಮಣ್ಣಲ್ಲೇ ಅದುರಿ, ತೂರಾಡಿ ಬಿದ್ದು, ಬೇಡವಾದ ಹೂ ಆಗುವುದು.

ಎಂ.ಎಸ್. ಧರ್ಮೇಂದ್ರ, ಜಿ.ಟಿ.ಆರ್.ಐ.

ಕೆಲವು ಖಾಸಗಿ ವೈದ್ಯರನ್ನು ಯಮನ ಏಜೆಂಟ್ ಎನ್ನಬಹುದೇ?



ಶುದ್ಧ ತಪ್ಪು. ಅವರು ಏಜೆಂಟ್ ಅಲ್ಲ, ದೊಡ್ಡಣ್ಣ!

ಎಂ.ಎನ್. ಸೋಮಶೇಖರ್, ಮೈಸೂರು

ಮೈತ್ರಿ ಎಂದರೇನು?

ನನ್ನ ಮೂರು ಎಂದು – ನಾನು, ನನ್ನ ಆಸ್ತಿ, ನನ್ನ ಮಕ್ಕಳು!

ಮುರಲೀಧರ ಕುಲಕರ್ಣಿ, ಬೀದರ್

ಕರ್ನಾಟಕದ ಬಸ್ಸುಗಳ ವೇಗಕ್ಕಿಂತ ಬಸ್ ದರ ಹೆಚ್ಚಳದ ವೇಗವೇ ಹೆಚ್ಚಾಯಿತಲ್ಲ?

ಬಸ್ಸು ಬದುಕಿನಂತೆ– ಮುಂಚಾಲನೆ ನಿಧಾನ. ದರ ಆತ್ಮದಂತೆ ಕ್ಷಣಗಳಲ್ಲೇ ವೇಗವಾಗಿ ಗಗನದತ್ತ ಪಯಣ!

■ ರಾಮ್